23)	**ತುಮಕೂರು ಜಿಲ್ಲೆ**
92.	ಜಿಲ್ಲಾ ಕಾರಾಗೃಹ ತುಮಕೂರು
93.	ತಾಲ್ಲೂಕು ಉಪ ಕಾರಾಗೃಹ ಮಧುಗಿರಿ
94.	ತಾಲ್ಲೂಕು ಉಪ ಕಾರಾಗೃಹ ತಿಪಟೂರು
95.	ಜಿಲ್ಲಾ ಕಾರಾಗೃಹ ಚಿತ್ರದುರ್ಗ
24)	**ಉಡುಪಿ ಜಿಲ್ಲೆ**
96	ತಾಲ್ಲೂಕು ಉಪ ಕಾರಾಗೃಹ ಉಡುಪಿ
97.	ತಾಲ್ಲೂಕು ಉಪ ಕಾರಾಗೃಹ ಕುಂದಾಪುರ
25)	**ಮಂಡ್ಯ ಜಿಲ್ಲೆ**
98.	ಜಿಲ್ಲಾ ಕೇಂದ್ರ ಕಾರಾಗೃಹ ಮಂಡ್ಯ

1921 (1740) ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳೇ ಹುಬ್ಬಳ್ಳಿಯ ವಿಭಾಗ ನಂ. 65, 60, 61, 62, 64, 63 ಮತ್ತು 67 ರಲ್ಲಿ ಕುಡಿಯುವ ನೀರಿನ ತೊಂದರೆ ಹೋಗಲಾಡಿಸಲು ಎಸ್. ಎಂ.ಕೃಷ್ಣ ನಗರದ ಆಶ್ರಯ ಕಾಲನಿ ಪ್ರದೇಶದಲ್ಲಿ ನೀರಿನ ಸಂಗ್ರಹಾಗಾರವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ನೀರಿನ ಸಂಗ್ರಾಹಾಗಾರ ಕಟ್ಟಲಿಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಕಾಮಗಾರಿಯ ವಿಳಂಬಕ್ಕೆ ಕಾರಣವೇನು;

ಈ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಹೌದು

ಆ) 55.00 ಲಕ್ಷ ರೂ.ಗಳು

ಇ) ಯೋಜನೆಯ ಕಾಮಗಾರಿಗಳಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ, ಶೀಘ್ರದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ) ಮೇಲಿನಂತೆ

1922 (1744) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹೊರ ವರ್ತುಲ ರಸ್ತೆಗಳನ್ನು ಒಳಪಟ್ಟಂತೆ 2, 3 ಮತ್ತು 4 ಚಕ್ರ ವಾಹನಗಳಿಗೆ ಪ್ರತ್ಯೇಕ ಲೇನ್ ಪದ್ಧತಿಯನ್ನು ಜಾರಿಗೆ ತರಲು ಯೋಜನೆ ಇಲ್ಲವೇ ಪ್ರಸ್ತಾವನೆಯನ್ನು ಸರ್ಕಾರ ಹಮ್ಮಿಕೊಂಡಿದೆಯೇ;

ಆ) ಹಾಗಿದ್ದಲ್ಲಿ ಯಾವ ರಸ್ತೆಗಳಲ್ಲಿ ಈ ಪದ್ಧತಿಯನ್ನು ತರಲು ಗುರುತಿಸಲಾಗಿದೆ ಮತ್ತು ಈ ಪದ್ಧತಿಯನ್ನು ಎಂದಿನಿಂದ ಜಾರಿಗೆ ತರಲಾಗುವುದು;

ಇ) ಇಲ್ಲದ ಪಕ್ಷದಲ್ಲಿ ಈ ಪದ್ಧತಿಯು ಅಪಘಾತಗಳನ್ನು ಮಿತಿಗೊಳಿಸುವುದರಿಂದ ಏಕೆ ಜಾರಿಗೆ ತರಲಿಲ್ಲ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರದಲ್ಲಿ ಸುಗಮ ಸಂಚಾರದ ದೃಷ್ಟಿಯಿಂದ ಈ ಕೆಳಕಂಡ 14 ಮುಖ್ಯ ರಸ್ತೆಗಳಲ್ಲಿ ಆಟೋಲೈನ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಈ ಪದ್ಧತಿಯಿಂದ ಅತಿವೇಗವಾಗಿ ಚಲಿಸುವ ವಾಹನಗಳ ಪ್ರಮಾಣದ ವೇಳೆ ಕಡಿಮೆಯಾಗಿರುತ್ತದೆ. ದ್ವಿಚಕ್ರ ವಾಹನಗಳಿಗೆ ಪ್ರತ್ಯೇಕವಾದ ಲೇನ್ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರದಲ್ಲಿ ಪ್ರಸ್ತಾವನೆ ಇರುವುದಿಲ್ಲ ಮತ್ತು ಬಸ್ಸುಗಳಿಗೆ ಪ್ರತ್ಯೇಕವಾದ ಲೇನ್ ಪದ್ಧತಿಯನ್ನು ಬಿಎಂಟಿಸಿ ಸಂಸ್ಥೆಯವರೊಂದಿಗೆ ಸಮಾಲೋಚಿಸಿ ಜಾರಿಗೆ ತರಲು ಪ್ರಸ್ತಾವನೆಯ ಬಗ್ಗೆ ಯೋಚಿಸಲಾಗುವುದು.

ಆ) ಪ್ರತ್ಯೇಕವಾದ ಆಟೋ ಲೇನ್ ಪದ್ಧತಿಯನ್ನು ಈ ಕೆಳಕಂಡ 14 ಮುಖ್ಯ ರಸ್ತೆಗಳಲ್ಲಿ ಜಾರಿಯಲ್ಲಿರುತ್ತದೆ.

1) ಕ್ವೀನ್ಸ್ ರಸ್ತೆ ಕ್ವೀನ್ಸ್ ವೃತ್ತದಿಂದ ಸಿ.ಟಿ.ಓ ಜಂಕ್ಷನ್‌ವರೆಗೆ

2) ಕ್ವೀನ್ಸ್ ರಸ್ತೆ ಸಿ.ಟಿ.ಓ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ